ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ್ ಅರಳಿ ಇವರು ನಿಯಮ 72ರಡಿ ಮಂಡಿಸಿರುವ ಗಮನಸೆಳೆಯುವ ಸೂಚನೆ ಸಂಖ್ಯೆ:89ಕ್ಕೆ ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಉತ್ತರ:

ಪ್ರಶ್ನೆ:

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಯಾದಗಿರಿ ಜಿಲ್ಲೆ ಯಾದಗಿರಿ ವಿಭಾಗದಲ್ಲಿ ಮಾನಪ್ಪ (933) ಚಾಲಕ ಕಂ-ನಿರ್ವಾಹಕರು ಇವರ ನೇಮಕಾತಿ ಹಾಗೂ ಅಮಾನತ್ತನ್ನು ಕಳೆದ ಬಜೆಟ್ ಅಧಿವೇಶನದಲ್ಲಿ ಚರ್ಚಿಸಿದ್ದು, ಮಾನ್ಯ ಸಚಿವರು ಸದನದಲ್ಲಿ ಭರವಸೆಯನ್ನು ನೀಡಿದ್ದು, ಭರವಸೆಯಾಗಿ ಈವರೆಗೆ ಈಡೇರದಿರುವ ಕುರಿತು ನಿಯಮ 72ರ ಮೇರೆಗೆ ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಗಮನ ಸೆಳೆಯಬಯಸುತ್ತೇನೆ.

ಉತ್ತರ:

ಶ್ರೀ ಮಾನಪ್ಪ (933) ಚಾಲಕ-ಕಂ-ನಿರ್ವಾಹಕ ಎಂಬ ಹೆಸರಿನ ಯಾವುದೇ ನೌಕರನನ್ನು ಸಂಸ್ಥೆಯ ಸೇವೆಯಿಂದ ಪ್ರಸ್ತುತ ಅಮಾನತ್ತು ಮಾಡಿರುವುದಿಲ್ಲ. ಆದರೆ, ಶ್ರೀ ಮಾನಪ್ಪ ಚಾಲಕ ಕಂ ನಿರ್ವಾಹಕ ಬಿ.ಸಂ. 900 (ತರಬೇತಿ), ಕ.ಕ.ರ.ಸಾ.ನಿಗಮ, ಗುರುಮಿಠಕಲ್ ಘಟಕ, ಯಾದಗಿರಿ ವಿಭಾಗ ಇವರು ದಿನಾಂಕ:27.02.2012ರಂದು ಸಂಸ್ಥೆಯ ಸೇವೆಗೆ ತರಬೇತಿ ಮೇರೆಗೆ ನಿಯೋಜನೆಗೊಂಡಿರುತ್ತಾರೆ. ಸಂಸ್ಥೆಯಲ್ಲಿ ನೇಮಕಾತಿ ಹೊಂದುವ ಮೊದಲು ದ್ವಿಪತ್ನಿ ಹೊಂದಿದ್ದರೂ. ಸಂಸ್ಥೆಗೆ ಸುಳ್ಳು ಮಾಹಿತಿಯನ್ನು ನೀಡಿ, ಅಕ್ರಮ ನೇಮಕಾತಿ ಹೊಂದಿರುತ್ತಾರೆ. ಆ ಮೂಲಕ ಕ.ರಾ.ರ.ಸಾ.ಸಂಸ್ಥೆಯ ಪದವೃಂದ ಮತ್ತು ನೇಮಕಾತಿ ನಿಯಮಾವಳಿಯ ನಿರ್ದೇಶನಗಳನ್ನು ಉಲ್ಲಂಘಿಸಿರುತ್ತಾರೆ.

ಈ ಕುರಿತು ಇಲಾಖಾ ವಿಚಾರಣೆ ನಡೆಸಿ ದ್ವಿಪತ್ನಿಯರನ್ನು ಹೊಂದಿ ನೇಮಕಾತಿ ಹೊಂದಿರುವ ಅವರ ಮೇಲಿನ ಆರೋಪ ಸಾಬೀತಾಗಿರುವುದರಿಂದ, ಸಂಸ್ಥೆಯ ನಿಯಮಾವಳಿಗೆ ವಿರುದ್ಧ ಸದರಿಯವರನ್ನು ನೇಮಕಾತಿ ಪ್ರಾಧಿಕಾರಸ್ಥರಾದ ವಿಭಾಗೀಯ ನಿಯಂತ್ರಣಾಧಿಕಾರಿ, ಯಾದಗಿರಿ ವಿಭಾಗ ಇವರು ಸಂಸ್ಥೆಯ ಪದವೃಂದ ಮತ್ತು ನೇಮಕಾತಿ ನಿಯಮಾವಳಿ-1982ರ ನಿಯಮ-12 (1) & (2) ಹಾಗೂ ನೇಮಕಾತಿ ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳನ್ವಯ ತರಬೇತಿ ಚಾಲಕ-ಕಂ-ನಿರ್ವಾಹಕ ಹುದ್ದೆಯ ಆಯ್ಕೆಪಟ್ಟಿಯಿಂದ ದಿನಾಂಕ:12.01.2022 ರಂದು ತೆಗೆದುಹಾಕಿರುತ್ತಾರೆ.

ಸದರಿ ಶ್ರೀ ಮಾನಪ್ಪ ಚಾಲಕ ಕಂ ನಿರ್ವಾಹಕ ಬಿ.ಸಂ. 900 (ತರಬೇತಿ), ಕ.ಕ.ರ.ಸಾ.ನಿಗಮ, ಗುರುಮಿಠಕಲ್ ಘಟಕ, ಯಾದಗಿರಿ ವಿಭಾಗರವರು ಆಯ್ಕೆಪಟ್ಟಿಯಿಂದ ತೆಗೆದುಹಾಕಲ್ಪಟ್ಟ ಆದೇಶದ ವಿರುದ್ಧ ದಯಾಯಾಚನಾ ಮನವಿ ಪ್ರಾಧಿಕಾರಸ್ಥರಿಗೆ ದಿನಾಂಕ 18.01.2022 ರಂದು ದಯಾಯಾಚನಾ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಯ ಪ್ರಕರಣದ ಬಗ್ಗೆ ಮುಖ್ಯ ಕಾನೂನು ಅಧಿಕಾರಿಗಳ ಅಭಿಪ್ರಾಯವನ್ನು ಪಡೆಯಲಾಗಿದ್ದು, ಸದರಿ ಕಾನೂನು ಅಭಿಪ್ರಾಯವನ್ನು ಪರಿಶೀಲಿಸಲಾಗುತ್ತಿದ್ದು, ಕೂಡಲೇ ನಿಯಮಾನುಸಾರ ಅಂತಿಮ ಆದೇಶ ಹೊರಡಿಸಲಾಗುವುದು.

ಸಂಖ್ಯೆ: ಟಿಡಿ 206 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ

Generated from eOffice by B. SREERAMULU, TD MIN(BS), TRANSPORT MINISTER, Transport 17/03/2022 02:37 PM

C-89